

# ಅರ್ಬುದಕ್ಕೇಕೆ ಬಡವರ ಮೇಲೆ ಕಣ್ಣು?

ಕ್ಯಾನ್ಸರ್ ಎಂದರೆ ಸಾಮಾನ್ಯವಾಗಿ ಎಲ್ಲರ ಜೀವಭಯ ಅಡರಿ ಹೋಗುತ್ತದೆ. ಅರ್ಬುದ ರೋಗಕ್ಕೆ ಬಲಿಯಾಗುವವರು ಬಹುತೇಕ ಬಡವರೇ. ಬೆಂಗಳೂರಿನಲ್ಲಿರುವ ರಾಜ್ಯದ ಅತ್ಯಂತ ದೊಡ್ಡ ಮತ್ತು ಸುಸಜ್ಜಿತ ಕ್ಯಾನ್ಸರ್ ಆಸ್ಪತ್ರೆಯಾದ ಕಿದ್ವಾಯಿ ಸ್ಮಾರಕ ಗಂಥಿ ಆಸ್ಪತ್ರೆಯಲ್ಲಿ ಪ್ರತಿನಿತ್ಯ ಚಿಕಿತ್ಸೆಗಾಗಿ ದಾಖಲಾಗುವ ಶೇ.90ರಷ್ಟು ರೋಗಿಗಳು ಬಡವರೇ. ಇದೇ ಆಸ್ಪತ್ರೆಗೆ ಹೊಸದಾಗಿ ನಿರ್ದೇಶಕರಾಗಿ ಅಧಿಕಾರ ವಹಿಸಿದ ಡಾ.ಕೆ.ಬಿ. ಲಿಂಗೇಗೌಡ ಅವರ ಜತೆಗೆ 'ಸುಧಾ' ನಡೆಸಿದ ಸಂದರ್ಶನ ಇಲ್ಲಿದೆ.

■ ಉಮಾ ಅನಂತ್

★ ಅತ್ಯಾಧುನಿಕ ವೈದ್ಯಕೀಯ ವ್ಯವಸ್ಥೆ ಇರುವ ಇಂದಿನ ಕಾಲದಲ್ಲೂ ಕ್ಯಾನ್ಸರ್ ಎಂದಾಕ್ಷಣ ಜನ ಬೆಚ್ಚಿಬೀಳಲು ಕಾರಣವೇನು?

ಹೆಚ್ಚಿನ ರೋಗಿಗಳಿಗೆ ಕ್ಯಾನ್ಸರ್‌ಗೆ ಇಂಥದ್ದೇ ಎಂಬ ಪಕ್ಕಾ ಕಾರಣ ಗೊತ್ತಿರಲ್ಲ. ತಪಾಸಣೆಗೆ ಬರುವ ಹೆಚ್ಚಿನ ಜನ ಕ್ಯಾನ್ಸರ್ ಬಂತು ಎಂದರೆ ಅದರ ಭಯಕ್ಕೇ ಡಿಪ್ರೆಸ್ ಆಗ್ತಾರೆ. ಭಯದ ಜತೆಗೆ ಇನ್ನು ಸಾವು ಖಚಿತ, ಮನೆಯ ಕಡೆ ಯೋಚನೆ, ಪುರುಷರಾದರೆ ಪತ್ನಿ, ಮಕ್ಕಳ ಕಡೆ ಮತ್ತು ಮಹಿಳೆಯರಾದರೆ ಗಂಡ, ಮಕ್ಕಳ ಭವಿಷ್ಯದ ಚಿಂತೆ ಕಾಡಲಾರಂಭಿಸುತ್ತದೆ. ಕ್ಯಾನ್ಸರ್ ರೋಗ ಖಚಿತವಾದ ರೋಗಿಗೆ ದೈಹಿಕ, ಮಾನಸಿಕ, ಸಾಮಾಜಿಕ ಮತ್ತು ತಾತ್ವಿಕ.. ಹೀಗೆ ನಾಲ್ಕು ತರದ ಯೋಚನೆಗಳೂ ಇರುತ್ತವೆ. ಇದರ ಜತೆಗೆ 'ಅಯ್ಯೋ ಭಗವಂತ ನನಗೆ ಯಾಕೆ ಇಂಥ ಕಷ್ಟ ಕೊಟ್ಟ...?' ಎಂಬ ಪ್ರಶ್ನೆಯೂ ಕಾಡಲಾರಂಭಿಸಿ ರೋಗಿ ಕಂಗಾಲಾಗುತ್ತಾನೆ.

ಇನ್ನು ಸೌಲಭ್ಯಗಳ ನಿಟ್ಟಿನಲ್ಲಿ ಹೇಳುವುದಾದರೆ ಕಿದ್ವಾಯಿ ಆಸ್ಪತ್ರೆ ಸರ್ಕಾರಿ ಸ್ವಾಮ್ಯದ ರಾಜ್ಯದ ಅತ್ಯಂತ ದೊಡ್ಡ ಕ್ಯಾನ್ಸರ್ ಕೇರ್ ಆಸ್ಪತ್ರೆಯಾಗಿದ್ದು, ಇಲ್ಲಿ ರೇಡಿಯೊಥೆರಪಿ, ಕೀಮೊಥೆರಪಿ, ಸರ್ಜರಿಗೆ ಸಂಬಂಧಿಸಿದ ಅತ್ಯಾಧುನಿಕ ಸೌಲಭ್ಯಗಳಿವೆ. ನುರಿತ ವೈದ್ಯರಿದ್ದಾರೆ. ಇಲ್ಲಿ ಬರುವ ಶೇ.90ರಷ್ಟು ರೋಗಿಗಳು ಬಡವರೇ ಆಗಿರುತ್ತಾರೆ. ಇವರಿಗೆ ಸರ್ಕಾರದ ಆರೋಗ್ಯ ಯೋಜನೆಗಳಿದ್ದು, ಅದರ ಸೌಲಭ್ಯಗಳನ್ನೂ ಪಡೆಯುತ್ತಿದ್ದಾರೆ.

★ ಯಾವ ರೀತಿಯ ಕ್ಯಾನ್ಸರ್ ಜನರನ್ನು ಕಾಡುವುದು ಹೆಚ್ಚು?

ಸಾಮಾನ್ಯವಾಗಿ ಬಾಯಿ ಕ್ಯಾನ್ಸರ್, ಶ್ವಾಸಕೋಶ, ಗಂಟಲು, ದೊಡ್ಡ ಕರುಳಿನ ಕ್ಯಾನ್ಸರ್, ಅನ್ನಾಂಗದ ಕ್ಯಾನ್ಸರ್, ತಂಬಾಕು ಉತ್ಪನ್ನ ಸೇವಿಸುವ ಚಟ ಇರುವವರಲ್ಲಿ ಬಾಯಿ, ಹೊಟ್ಟೆ ಕ್ಯಾನ್ಸರ್ ಮಾಮೂಲು. ಮಹಿಳೆಯರಲ್ಲಿ ಗರ್ಭಕೊರಳಿನ ಕ್ಯಾನ್ಸರ್, ಸ್ತನ ಕ್ಯಾನ್ಸರ್ ಹೆಚ್ಚಾಗಿ ಕಾಡುತ್ತದೆ. ಆಸ್ಪತ್ರೆಗೆ ದಾಖಲಾಗುವ ಬಹುಪಾಲು ರೋಗಿಗಳು ಕ್ಯಾನ್ಸರ್‌ನ ಕೊನೆಯ ಹಂತ ತಲುಪಿರುತ್ತಾರೆ. ಏಕೆಂದರೆ ಯಾವುದೇ ಒಂದು ಲಕ್ಷಣ ಕಂಡು ಬಂದರೂ ತಪಾಸಣೆ, ಸ್ಕ್ಯಾನಿಂಗ್ ಮಾಡಿಸಿಕೊಳ್ಳಲ್ಲ. ಆರಂಭದ ಹಂತದ ಕ್ಯಾನ್ಸರ್ ಗುಣಪಡಿಸುವುದು ಬಹಳ ಸುಲಭ. ಇದಕ್ಕಾಗಿಯೇ 'ಶೀಘ್ರ ಪತ್ತೆ, ಕ್ಯಾನ್ಸರ್ ನಾಪತ್ತೆ' ಎಂಬ ಮಾತು ಹುಟ್ಟಿಕೊಂಡಿದೆ.



ಡಾ.ಕೆ.ಬಿ. ಲಿಂಗೇಗೌಡ, ನಿರ್ದೇಶಕರು, ಕಿದ್ವಾಯಿ ಸ್ಮಾರಕ ಗಂಥಿ ಆಸ್ಪತ್ರೆ

★ ಕಿದ್ವಾಯಿ ಆಸ್ಪತ್ರೆಗೆ ದಾಖಲಾಗುವ ರೋಗಿಗಳು ಹೆಚ್ಚು ಯಾವ ಕ್ಯಾನ್ಸರ್‌ಗೆ ಒಳಗಾಗಿ ಬರುವವರು?

ತಂಬಾಕು ಉತ್ಪನ್ನಕ್ಕೆ ಸಂಬಂಧಿಸಿ ಅರ್ಬುದ ರೋಗ ಅಂಟಿಸಿ ದಾಖಲಾಗುವವರ ಸಂಖ್ಯೆ ಅಧಿಕ. ಮಹಿಳೆಯರಲ್ಲಿ ರಾಜ್ಯದ ಎಲ್ಲ ಭಾಗಗಳಿಂದ ಬರುವ ರೋಗಿಗಳಲ್ಲಿ ಬಹುತೇಕ ಮಂದಿ ಬಳಲುವುದು ಗರ್ಭಕೊರಳು ಮತ್ತು ಸ್ತನದ ಕ್ಯಾನ್ಸರ್‌ನಿಂದ. ಕ್ಯಾನ್ಸರ್‌ಗೆ ತುತ್ತಾದ ಮಕ್ಕಳೂ ಇಲ್ಲಿ ದಾಖಲಾಗುತ್ತಾರೆ. ತಿಂಗಳಿಗೆ ಸುಮಾರು 500 ಹೊಸ ಕೇಸ್‌ಗಳು ಮತ್ತು 1,500 ಫಾಲೋ ಅಪ್ ಕೇಸ್‌ಗಳು ದಾಖಲಾಗುತ್ತವೆ. ಆದರೆ ಮಕ್ಕಳಲ್ಲಿ ಶೇ.90 ರಷ್ಟು ಮಂದಿ ಸಂಪೂರ್ಣ ಗುಣವಾಗಿ ಮನೆಗೆ ತೆರಳಿದ ಅನೇಕ ಉದಾಹರಣೆಗಳಿವೆ. ಇಲ್ಲಿ ಗುಣಮುಖರಾಗಿ ಹೋದ ಕೆಲವು ಮಕ್ಕಳು ಓದಿ

ಎಂಜಿನಿಯರ್, ಡಾಕ್ಟರ್ ಆದದ್ದೂ ಇದೆ.

ಇಲ್ಲಿಗೆ ರಾಜ್ಯದ ಎಲ್ಲ ಜಿಲ್ಲೆಗಳಿಂದಲೂ, ಹಳ್ಳಿಗಳಿಂದಲೂ ರೋಗಿಗಳು ಬರುತ್ತಾರೆ. ಹೊರರಾಜ್ಯದ ಶೇ.20ರಷ್ಟು ರೋಗಿಗಳು ಚಿಕಿತ್ಸೆ ಪಡೆಯುತ್ತಿದ್ದಾರೆ. ಬಾಂಗ್ಲಾದೇಶದಿಂದಲೂ ರೋಗಿ ಬಂದು ಚಿಕಿತ್ಸೆ ಪಡೆದು ಹೋದ ಉದಾಹರಣೆಯೂ ಇದೆ.

★ ಕ್ಯಾನ್ಸರ್ ಪತ್ತೆ ಹೇಗೆ? ಮತ್ತು ಇದರ ಗುಣಲಕ್ಷಣಗಳೇನು?

ಸ್ತನಗಳಲ್ಲಿ ಮತ್ತು ಇತರೆಡೆ ಕಾಣಿಸುವ ಗಡ್ಡೆ, ಸ್ತ್ರೀಯರಲ್ಲಿ ಅಸಾಮಾನ್ಯವಾದ ರಕ್ತ ಅಥವಾ ಇತರ ಸ್ರಾವಗಳು, ಗುಣವಾಗದ ಕೆಮ್ಮು, ಗೊಗ್ಗರು ಧ್ವನಿ, ದಿನೇದಿನೇ ಹೆಚ್ಚುವ ಅಜೀರ್ಣ ಮತ್ತು ತೂಕ ಕಡಿಮೆಯಾಗುವುದು, ಮಲ ಮೂತ್ರದಲ್ಲಿ ವ್ಯತ್ಯಾಸವಾಗುತ್ತಾ ಹೋಗುವುದು, ಹುಟ್ಟು ಮಚ್ಚೆಗಳಲ್ಲಿ ವ್ಯತ್ಯಾಸವಾಗುತ್ತಾ ಹೋಗುವುದು, ಗುಣವಾಗದೇ ಇರುವ ಹುಣ್ಣು, ಬಾಯಿಯಲ್ಲಿನ ಬಿಳಿ ಮಚ್ಚೆ ಮುಂತಾದವು ಕಾರಣಗಳಾಗುತ್ತವೆ.

ಸ್ತನ ಕ್ಯಾನ್ಸರ್

ಸ್ತನ ದಪ್ಪವಾಗುತ್ತಾ ಹೋಗುವುದು, ಗಡ್ಡೆ ಕಾಣಿಸಿಕೊಳ್ಳುವುದು, ಸ್ತನದ ಗಾತ್ರ ಮತ್ತು ಆಕಾರದಲ್ಲಿ ಬದಲಾವಣೆ, ಸ್ತನ ಸುಕ್ಕುಗಟ್ಟುವುದು, ಸ್ತನದ ತೊಟ್ಟಿನಿಂದ ರಕ್ತಸ್ರಾವ, ಸ್ತನದ ಚರ್ಮದಲ್ಲಿ ಬದಲಾವಣೆ ಉಂಟಾಗುತ್ತದೆ. 30 ವರ್ಷ ಮೇಲ್ಪಟ್ಟ ಮಹಿಳೆಯರು ಸ್ವತಃ ಸ್ತನಗಳನ್ನು ಪರೀಕ್ಷಿಸಿಕೊಂಡು ಈ ಯಾವುದಾದರೂ ಲಕ್ಷಣಗಳು ಕಂಡುಬಂದರೆ ತಕ್ಷಣ ವೈದ್ಯರನ್ನು ಕಾಣಬೇಕು.

ಸ್ತನದ ಪರೀಕ್ಷೆ, ಮ್ಯಾಮೊಗ್ರಫಿ, ಅಲ್ಟ್ರಾಸೊನೊಗ್ರಫಿ ಪರೀಕ್ಷೆ, ಸ್ತನದ ತೊಟ್ಟಿನಲ್ಲಿ ರಕ್ತಸ್ರಾವವಾದರೆ ಸೈಟಾಲಜಿ ಪರೀಕ್ಷೆ ಮಾಡಿಸಿಕೊಳ್ಳಬೇಕು.

ಗರ್ಭ ಕೊರಳಿನ ಕ್ಯಾನ್ಸರ್

ಈ ಕ್ಯಾನ್ಸರ್ 35ರಿಂದ 60 ವರ್ಷದವರೆಗಿನ ಮಹಿಳೆಯರಲ್ಲಿ ಕಾಣಿಸಿಕೊಳ್ಳುವ ಒಂದು ಸಾಮಾನ್ಯವಾದ ಕ್ಯಾನ್ಸರ್. ಅತಿಯಾದ ಬಿಳಿಸೆರಗು, ಋತುಸ್ರಾವದ ಜತೆಗೆ ರಕ್ತಸ್ರಾವ, ಹೊಟ್ಟೆ ಮತ್ತು ಸೊಂಟದಲ್ಲಿ ನೋವು, ಆರಂಭದಲ್ಲಿ ಪತ್ತೆ ಹಚ್ಚುವ ಪ್ಯಾಪ್ ಪರೀಕ್ಷೆಯನ್ನು ಎಲ್ಲ ಮಹಿಳೆಯರು ಮಾಡಿಸಿಕೊಳ್ಳಬೇಕು. ಈ ಪರೀಕ್ಷೆ ನೋವಿಲ್ಲದ ಸರಳ ವಿಧಾನ.

ಬಾಯಿ ಕ್ಯಾನ್ಸರ್

ಬಾಯಿಯಲ್ಲಿ ಬಿಳಿ ಮಚ್ಚೆ, ಕುತ್ತಿಗೆಯಲ್ಲಿ ನೋವಿಲ್ಲದ ಗಡ್ಡೆ, ಬಾಯಿಯಲ್ಲಿ ಕೆಂಪಾದ ಹುಣ್ಣುಗಳು, ತಂಬಾಕು ಬಳಸುವವರೆಲ್ಲ ಬಾಯಿ ಪರೀಕ್ಷೆ ಮಾಡಿಸಿಕೊಳ್ಳಬೇಕು.

★ ಕ್ಯಾನ್ಸರ್ ಬರದಂತೆ ತಡೆಯಲು ಏನಾದರೂ ಉಪಾಯ ಇದೆಯೇ?

ಆಹಾರದಲ್ಲಿ ಕೊಬ್ಬಿನಂಶ ಮತ್ತು ಎಣ್ಣೆ ಪದಾರ್ಥ ಕಡಿಮೆ ಮಾಡಿ, ಹಣ್ಣು ತರಕಾರಿ ಹೆಚ್ಚು ಬಳಸಬೇಕು, ತಂಬಾಕು ಉತ್ಪನ್ನಗಳಾದ ಬೀಡಿ, ಸಿಗರೇಟು, ಹೊಗೆಸೊಪ್ಪು ಮತ್ತು ಎಲೆ ಅಡಿಕೆ ತಂಬಾಕು ಬಳಸಲೇ ಬಾರದು, ಜನನಾಂಗಗಳನ್ನು ಸ್ವಚ್ಛವಾಗಿ ಇಟ್ಟುಕೊಳ್ಳಬೇಕು. ಸಾತ್ವಿಕ ಆಹಾರಕ್ಕೆ ಆದ್ಯತೆ ನೀಡಬೇಕು. ಆಹಾರದಲ್ಲಿ ಸೊಪ್ಪು, ತರಕಾರಿ, ಹಣ್ಣು ಹೆಚ್ಚು ಸೇವಿಸಬೇಕು. ಪ್ರತಿ ಆರು ತಿಂಗಳಿಗೊಮ್ಮೆ ರಕ್ತಪರೀಕ್ಷೆ, ಸಂಶಯವಿದ್ದರೆ ಸ್ಕ್ಯಾನಿಂಗ್ ಮಾಡಿಸಿಕೊಳ್ಳಬೇಕು.

★ ಕರ್ನಾಟಕದಲ್ಲಿ ಕ್ಯಾನ್ಸರ್ ರೋಗಿಗಳ ಸಂಖ್ಯೆ ಅಂದಾಜು ಎಷ್ಟಿದೆ?

ರಾಜ್ಯದಲ್ಲಿ ಪ್ರತಿ ವರ್ಷ ಅಂದಾಜು 51 ಸಾವಿರದಷ್ಟು ರೋಗಿಗಳು ಹೊಸದಾಗಿ ಸೇರ್ಪಡೆಯಾಗುತ್ತಿದ್ದಾರೆ. 2014 ರ ಅಂಕಿ ಅಂಶ ತೆಗೆದುಕೊಂಡರೆ 18 ಸಾವಿರ ಪ್ರಕರಣಗಳು ಕಿದ್ವಾಯಿ ಆಸ್ಪತ್ರೆ ಒಂದರಲ್ಲೇ ದಾಖಲಾಗಿದ್ದು, ಇವರಲ್ಲಿ 9,200 ಪ್ರಕರಣಗಳು ಕ್ಯಾನ್ಸರ್ ಎಂದು ಸಾಬೀತಾಗಿದೆ. ತಂಬಾಕು ಸೇವನೆಗೆ ಸಂಬಂಧಪಟ್ಟ ಕ್ಯಾನ್ಸರ್ ರೋಗಿಗಳಲ್ಲಿ 2013ರಲ್ಲಿ ಪುರುಷರು 1933, ಮಹಿಳೆಯರು 1008 ರೋಗಿಗಳು (ಒಟ್ಟು 2941) ದಾಖಲಾಗಿದ್ದರು.

ಈಗಾಗಲೇ ರಾಜ್ಯದಲ್ಲಿ 1.5 ಲಕ್ಷ ಕ್ಯಾನ್ಸರ್ ರೋಗಿಗಳಿದ್ದು, ಇವರ ಜತೆಗೆ ವರ್ಷಕ್ಕೆ 51 ಸಾವಿರ ಹೊಸ ರೋಗಿಗಳು ಸೇರುತ್ತಿರುವುದು ಆತಂಕದ ವಿಚಾರ. ಸುಮಾರು ಐದೂವರೆ ಸಾವಿರ ಮಹಿಳೆಯರು ಸ್ತನ ಕ್ಯಾನ್ಸರ್, 63 ಸಾವಿರ ಮಹಿಳೆಯರು ಗರ್ಭಕೊರಳಿನ ಕ್ಯಾನ್ಸರ್, ಆರು ಸಾವಿರ ಮಂದಿ ಬಾಯಿ ಕ್ಯಾನ್ಸರ್ ರೋಗಿಗಳು ಪ್ರತಿ ವರ್ಷ ಹೊಸದಾಗಿ ಪತ್ತೆಯಾಗುತ್ತಿದ್ದಾರೆ.

★ ಕ್ಯಾನ್ಸರ್ ಕುರಿತು ಅರಿವು, ಜಾಗೃತಿ ಕಾರ್ಯಕ್ರಮಗಳನ್ನು ಸಂಸ್ಥೆಯ ವತಿಯಿಂದ ಹಮ್ಮಿಕೊಂಡಿದ್ದೀರಾ?

ಹೌದು. ಹಳ್ಳಿ ಭಾಗಗಳಲ್ಲಿ ಜನರಿಗೆ ಕ್ಯಾನ್ಸರ್ ಬಗ್ಗೆ ಅರಿವು ಇರಲ್ಲ. ಹೀಗಾಗಿ ರಾಜ್ಯದ ಎಲ್ಲ ಭಾಗಗಳಿಗೆ ಖುದ್ದಾಗಿ ನಾವೇ ಹೋಗಿ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳುತ್ತಿದ್ದೇವೆ. ಕ್ಯಾನ್ಸರ್ ಅನ್ನು ಆರಂಭದಲ್ಲೇ ಪತ್ತೆ ಹಚ್ಚಿ ಚಿಕಿತ್ಸೆ ಪಡೆದರೆ ಸಂಪೂರ್ಣವಾಗಿ ಗುಣ ಮಾಡಬಹುದು ಎಂಬುದನ್ನು ಒತ್ತಿ ಹೇಳುತ್ತಿದ್ದೇವೆ. ಈ ಕುರಿತ ವಿಚಾರಸಂಕಿರಣ, ಕರಪತ್ರ ಹಂಚುವ ಕಾರ್ಯವನ್ನೂ ಮಾಡುತ್ತಿದ್ದೇವೆ.

★ ಕ್ಯಾನ್ಸರ್ ಆಸ್ಪತ್ರೆ ಅಭಿವೃದ್ಧಿಗೆ ಸರ್ಕಾರ ಇನ್ನೂ ಏನಾದರೂ ಹೆಚ್ಚಿನ ಯೋಜನೆ ಹಾಕಿಕೊಂಡಿದೆಯೇ?

ಸರ್ಕಾರದ ವಾಜಪೇಯಿ ಆರೋಗ್ಯ ವಿಮಾ ಯೋಜನೆಯ ಪ್ರಯೋಜನ ವನ್ನು ಬಿಪಿಎಲ್ ಕಾರ್ಡ್ ಇರುವ ರೋಗಿಗಳು ಪಡೆಯುತ್ತಿದ್ದಾರೆ. ಈ ಯೋಜನೆಯಲ್ಲಿ ಸುಮಾರು ಒಂದೂವರೆ ಲಕ್ಷ ರೂಪಾಯಿವರೆಗಿನ ಚಿಕಿತ್ಸೆ ಸಂಪೂರ್ಣ ಉಚಿತ. ಕೇಂದ್ರ ಮತ್ತು ರಾಜ್ಯ ಸರ್ಕಾರ ಸೇರಿ 120 ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದು, ಕಿದ್ವಾಯಿ ಆಸ್ಪತ್ರೆಯನ್ನು 'ರಾಜ್ಯ ಕ್ಯಾನ್ಸರ್ ಸಂಸ್ಥೆ' (ಸ್ಟೇಟ್ ಕ್ಯಾನ್ಸರ್ ಇನ್‌ಸ್ಟಿಟ್ಯೂಟ್) ಎಂದು ನಾಮಕರಣ ಮಾಡಲು ಉದ್ದೇಶಿಸಿವೆ.